


## ಮರೆಗುಳಿ ಭಟ್ಟರು

ನಾನು ಹುಬ್ಬಳ್ಳಿಯಲ್ಲಿದ್ದಾಗ ಅರುಣ ಭಟ್ ಎಂಬುವರು ನನ್ನ ರೂಮ್‌ಮೇಟ್ ಆಗಿದ್ದರು. ಅವರದು ಮರೆಗುಳಿ ಹಾಗೂ ಗಡಿಬಿಡಿ ಸ್ವಭಾವ. ಒಮ್ಮೆ ಅವರು ಪೇಟೆಗೆ ಹೋಗುವಾಗ ದಾರಿಯಲ್ಲಿ ಪೋಸ್ಟ್‌ಬಾಕ್ಸ್‌ಗೆ ಹಾಕಲೆಂದು ಕವರ್ ಒಂದು ತೆಗೆದುಕೊಂಡು ಹೋದರು. ಅವರ ಬಲಗೈಯಲ್ಲಿ ಪೋಸ್ಟ್ ಕವರ್ ಇತ್ತು. ಎಡಗೈಯಲ್ಲಿ ಉರಿಯುವ ಸಿಗರೇಟು ಇತ್ತು. ಅಂಚೆಪೆಟ್ಟಿಗೆ ಬಳಿ ಬಂದ ಅವರು ಎಡಗೈಯನ್ನು ಅಂಚೆಪೆಟ್ಟಿಗೆ ಒಳಗೆ ತೂರಿದರು. ಮತ್ತೆ ನಾಲ್ಕಾರು ಹೆಜ್ಜೆ ಮುಂದೆ ಹೋದ ಮೇಲೆ ಅವರಿಗೆ ನೆನಪಾಯಿತು. ಬಲಗೈಯಲ್ಲಿದ್ದ ಪೋಸ್ಟ್ ಕವರ್ ಕೈಯಲ್ಲೇ ಇತ್ತು. ಗಡಿಬಿಡಿಯಲ್ಲಿ ಉರಿಯುವ ಸಿಗರೇಟನ್ನೇ ಭಟ್ಟರು ಕವರ್ ಎಂದುಕೊಂಡು ಅಂಚೆಪೆಟ್ಟಿಗೆಗೆ ಹಾಕಿದ್ದರು!

**ಪಿ. ಜಯವಂತ ಪೈ**

## ‘ವೈನ್ ಆಗಿದೆ’

ಮನೆಯ ಎದುರು ‘ಬಾಕ್ಸ್ ಚರಂಡಿ’ಗಾಗಿ ಕಾಮಗಾರಿ ನಡೆದಿತ್ತು. ಮುಂಜಾನೆಯೇ ಗಂಡ ಹೆಂಡತಿ ಸಲಕರಣೆಗಳ ಸಮೇತ ಕೆಲಸಕ್ಕಾಗಿ ಆಗಮಿಸಿದ್ದರು. ಬಿರುಬಿಸಿಲಿನಲ್ಲಿ ಅವರು ಶ್ರಮದಿಂದ ಕೆಲಸ ಮಾಡುವುದನ್ನು ನಾವು ಮನೆಯಲ್ಲೇ ಕುಳಿತು ನೋಡುತ್ತಿದ್ದೆವು. ಮಧ್ಯಾಹ್ನ ಆ ಗಂಡ ಹೆಂಡತಿ ಕುಡಿಯಲು ನೀರು ಬೇಕೆಂದು ನಮ್ಮನೆಯ ಮುಂದೆ ಬಂದರು. ನನ್ನ ಹೆಂಡತಿ ಕುಡಿಯಲು ನೀರು, ಜೊತೆಗೆ ಬೆಲ್ಲದ ನಿಂಬು ಪಾನಕ (ಶರಬತ್ತು) ಕೊಟ್ಟಳು. ಇಬ್ಬರೂ ಖುಷಿಯಿಂದ ಪಾನಕ ಕುಡಿದು ‘ವೈನಾಗೈತೆ’ ಎಂದರು. ನನ್ನ ಹೆಂಡತಿ ‘ಏನಂದ್ರಿ?’ ಎಂದು ಮರು ಪ್ರಶ್ನೆ ಹಾಕಿದಾಗ ‘ವೈನ್ ಆಗೈತೆ’ ಅಕ್ಕವ್ರೆ’ ಎಂದರು. ‘ನೋಡ್ರಿ, ತಂಪಾಗಲಿ ಅಂತ ಲಿಂಬು ಪಾನಕ ಕೊಟ್ರೆ ವೈನ್ ಆಗಿದೆ ಅಂತಾರೆ’ ಎಂದು ನನ್ನ ಹೆಂಡತಿ ಸಿಟ್ಟಿನಿಂದ ಒಳಬಂದಳು. ‘ಅವರು ಚೆನ್ನಾಗಿದೆ ಎಂದು ಹೇಳೋಕೆ ವೈನಾಗಿದೆ ಎಂದು ಹೇಳಿದ್ದು’ ಅಂತ ತಿಳಿಸಿ ಹೇಳಿದಾಗ ನಕ್ಕಳು!

**ನಗರ ಗುರುದೇವ ಭಂಡಾರ್ಕರ್**

